# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1270 (1276) |
| ಸದಸ್ಯರ ಹೆಸರು | : | ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ.ಸಂ | ಪ್ರಶ್ನೆಯ ವಿವರ | ಉತ್ತರ |
|---|---|---|
| ಅ | ಮೈಸೂರಿನ ಪ್ರತಿಷ್ಠಿತ ಸಂಸ್ಥೆಯು ಕಾವಾದಲ್ಲಿ ಅಧ್ಯಯನ ಮಾಡಲು ಯಾವ ಯಾವ ವಿಷಯ ಸಂಯೋಜನೆಗಳ ಕೋರ್ಸುಗಳಿವೆ; ಅವುಗಳು ಸಾಮಾನ್ಯ ಪದವಿ ಮತ್ತು ಸ್ನಾತಕ್ಕೋತ್ತರ ಪದವಿಗಳಿಗೆ ಸಮಾನವೇ; ವಿವರಣೆ ನೀಡುವುದು; | ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಒಂದು ಶಿಕ್ಷಣ ಸಂಸ್ಥೆಯಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದ ಶಾಶ್ವತ ಸಂಯೋಜಿತ ಸಂಸ್ಥೆಯಾಗಿರುತ್ತದೆ. ಕಾವಾದಲ್ಲಿ ಪ್ರವೇಶಾತಿಗಾಗಿ ದ್ವಿತೀಯ ಪಿ.ಯು.ಸಿ.ಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಬಿ.ವಿ.ಎ. ಸ್ನಾತಕ ಪದವಿಗೆ ಪ್ರವೇಶ ಪಡೆಯಬಹುದು. ಸದರಿ ಬಿ.ವಿ.ಎ. ಕೋರ್ಸು 04 ವರ್ಷಗಳ ವೃತ್ತಿಪರ ಸ್ನಾತಕ ಪದವಿಯಾಗಿದ್ದು ಇದರಲ್ಲಿ ಒಟ್ಟು 06 ವಿಭಾಗಗಳಿದ್ದು, ಚಿತ್ರಕಲಾ ವಿಭಾಗ, ಅಚ್ಚು ಕಲಾ ವಿಭಾಗ, ಶಿಲ್ಪಕಲಾ ವಿಭಾಗ, ಅನ್ವಯ ಕಲಾ ವಿಭಾಗ, ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ ವಿಭಾಗ ಮತ್ತು ಕಲಾ ಇತಿಹಾಸ ವಿಭಾಗಗಳಿರುತ್ತವೆ. ದೃಶ್ಯಕಲಾ ಪದವಿಯು ಸಾಮಾನ್ಯ ಪದವಿಯಾಗಿರುವುದಿಲ್ಲ. ವಿಶೇಷವಾಗಿ 04 ವರ್ಷಗಳ ವೃತ್ತಿಪರ ಪದವಿ ಕೋರ್ಸ್ ಆಗಿರುತ್ತದೆ. ದೃಶ್ಯಕಲಾ ಶಿಕ್ಷಣವು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಇತರೆ ಸಾಮಾನ್ಯ ಪದವಿಗಳಿಗಿಂತ ವಿಶೇಷವಾಗಿದೆ. |
| ಆ | ಸದರಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; | ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಮೈಸೂರು ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಈ ಕೆಳಕಂಡಂತಿರುತ್ತದೆ:<br>1) ಖಾಯಂ ನೌಕರರ ಸಂಖ್ಯೆ : 17<br>2) ಗುತ್ತಿಗೆ ನೌಕರರ ಸಂಖ್ಯೆ : 07<br>3) ಬೋಧಕ ಸಿಬ್ಬಂದಿ : 05<br>4) ಬೋಧಕೇತರ ಸಿಬ್ಬಂದಿ :12 |
| ಇ | ಮೈಸೂರಿನ ಕಾವಾ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;<br>ಸದರಿ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಕೇಂದ್ರ ಮತ್ತು ರಾಜ್ಯ | ಮೈಸೂರಿನ ಕಾವಾ ಸಂಸ್ಥೆಯಲ್ಲಿ, 2025-26 ನೇ ಶೈಕ್ಷಣಿಕ ಸಾಲಿಗೆ ಬಿ.ವಿ.ಎ ಸ್ನಾತಕ ಪದವಿ ಅಧ್ಯಯನ ಮಾಡಲು 115 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. |

| | | |
|---|---|---|
| | ಸರ್ಕಾರದ ಇಲಾಖೆಗಳಲ್ಲಿ ಸರ್ಕಾರಿ ಉದ್ಯೋಗವನ್ನು ಪಡೆದುಕೊಳ್ಳಬಹುದೇ: ಇಲ್ಲದಿದ್ದಲ್ಲಿ ಯಾವ ಯಾವ ಇಲಾಖೆಗಳಲ್ಲಿ ಉಪಯೋಗವನ್ನು ಪಡೆದುಕೊಳ್ಳಬಹುದು? (ಪೂರ್ಣ ಮಾಹಿತಿ ನೀಡುವುದು) | ಸದರಿ ಸಂಸ್ಥೆಯಲ್ಲಿ ಪದವಿ ಪಡೆದಂತಹ ವಿದ್ಯಾರ್ಥಿಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಸರ್ಕಾರಿ ಉದ್ಯೋಗವನ್ನು ಪಡೆಯಬಹುದು ಹಾಗೂ ಕೇಂದ್ರ ಸರ್ಕಾರದ ಕೇಂದ್ರೀಯ ವಿದ್ಯಾಲಯಗಳಲ್ಲಿ ಕಲಾ ಶಿಕ್ಷಕರಾಗಿಯೂ ಉದ್ಯೋಗ ಪಡೆಯಲು ಅವಕಾಶವಿರುತ್ತದೆ. |

ಸಂಖ್ಯೆ:ಕಸಂವಾ 83 ಕವಿಸ 2025

**(ಶಿವರಾಜ್ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು